1. ಹೌದು

2. ಈ ಯೋಜನೆಯಲ್ಲಿ ಉದ್ದೇಶಿಸಲಾಗಿದ್ದ 7 ಸಂಖ್ಯೆಯ ಮೇಲ್ಮಟ್ಟದ ಜಲಸಂಗ್ರಹಾಗಾರಗಳಲ್ಲಿ 4 ಜಲಸಂಗ್ರಹಾಗಾರಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. ಕುವೆಂಪು ನಗರದ ಜಲಸಂಗ್ರಹಾಗಾರದ ಪ್ಲಾಸ್ಟರಿಂಗ್ ಮತ್ತು ಫಿನಿಷಿಂಗ್ ಕಾಮಗಾರಿ ನಡೆಯುತ್ತಿದ್ದು, ಈ ವಿಭಾಗಕ್ಕೆ ಪ್ರಮುಖ ಕೊಳವೆ ಮಾರ್ಗದಿಂದಲೇ ವಿತರಣಾ ಜಾಲಕ್ಕೆ ಸಂಪರ್ಕ ಕಲ್ಪಿಸಿ ನೀರು ಒದಗಿಸಲಾಗುತ್ತಿದೆ. ಉಳಿದೆರಡು ಜಲಸಂಗ್ರಹಾಗಾರಗಳನ್ನು ನಿರ್ಮಿಸಲು ನಗರಸಭೆ ವತಿಯಿಂದ ಸ್ಥಳ ಒದಗಿಸಬೇಕಾಗಿರುತ್ತದೆ. ಈ ಕಾರಣದಿಂದಾಗಿ ನಗರದ ಕೆಲವು ಭಾಗಗಳಲ್ಲಿ ನೀರಿನ ಸರಿಯಾದ ವಿತರಣೆ ಆಗುತ್ತಿರುವುದಿಲ್ಲ. ನಗರಕ್ಕೆ 2ನೇ ಹಂತದ ನೀರು ಸರಬರಾಜು ಯೋಜನೆ ಯಿಂದಲೇ 17.5 ದಶಲಕ್ಷ ಲೀಟರ್ ನೀರನ್ನು ಒದಗಿಸಲಾಗುತ್ತಿದ್ದು, ಪಟ್ಟಣದ ಜನಸಂಖ್ಯೆ ಸುಮಾರು 1,50,000 ಇದ್ದು ದಿನಂಪ್ರತಿ ತಲಾ 115 ಲೀಟರ್‌ಗಿಂತಲೂ ಹೆಚ್ಚಿಗೆ ನೀರನ್ನು ಒದಗಿಸಲಾಗುತ್ತಿದೆ. ಇದಲ್ಲದೆ ನಗರದ ಹಳೆ ಭಾಗಗಳಲ್ಲಿ ವಿತರಣಾ ಜಾಲವು ತುಂಬಾ ಹಳೆಯದಾಗಿರುವುದರಿಂದ ನವೀಕರಿಸಬೇಕಾಗಿರುತ್ತದೆ. ನಗರದ 11 ಜೋನ್‌ಗಳಲ್ಲಿ 3 ಜೋನ್‌ಗಳಲ್ಲಿ ವಿತರಣಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಯೋಜನಾ ವೆಚ್ಚ ಅನುಮೋದಿತ ಅಂದಾಜಿಗಿಂತ ಹೆಚ್ಚಾದುದರಿಂದ ಉಳಿದ 8 ಜೋನ್‌ಗಳಿಗೆ ವಿತರಣಾ ವ್ಯವಸ್ಥೆಗೆ ಪ್ರತ್ಯೇಕ ಯೋಜನೆಯನ್ನು ತಯಾರಿಸಲಾಗುವುದು.

ವಿಶ್ವೇಶ್ವರಯ್ಯ ನಾಲಾ ಆಚ್ಚುಕಟ್ಟಿನ ಪ್ರದೇಶದಲ್ಲಿನ ಏತ ನೀರಾವರಿ ಕಾಮಗಾರಿಗಳು.

2311(3163) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಶ್ವೇಶ್ವರಯ್ಯ ನಾಲಾ ಆಚ್ಚುಕಟ್ಟು ಪ್ರದೇಶದಲ್ಲಿನ ಏತ ನೀರಾವರಿ ಕಾಮಗಾರಿ ಚಾಲನೆಯಲ್ಲಿದಿಯೇ

ಆ) ಹಾಗಿದ್ದಲ್ಲಿ ಈ ಕಾಮಗಾರಿ ಯಾವ ಹಂತದಲ್ಲಿದೆ

ಇ) ಈ ಕಾಮಗಾರಿಗಳು ಸಂಪೂರ್ಣಗೊಳ್ಳುವುದಕ್ಕೆ ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :—

ಅ) 17 ಏತ ನೀರಾವರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಕಾಮಗಾರಿಗಳ ಪ್ರಗತಿಯ ಹಂತವನ್ನು ಅನುಬಂಧದಲ್ಲಿ ನೀಡಿದೆ.

ಇ) ಆರ್.ಸಿಸಿ. ಪ್ರೆಷರ್ ಪೈಪುಗಳ ಸರಬರಾಜು ಹಾಗೂ ಭೂಸ್ವಾಧೀನದಿಂದ ಉಂಟಾದ ಅಡಚಣೆಯಿಂದ ವಿಳಂಬವಾಗಿದೆ.

ಅನುಬಂಧ

ಕ್ರ. ಸಂ.	ಏ.ನೀ.ಯೋಜನೆಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯ ಹಂತ
1.	ಯಡವನಹಳ್ಳಿ	19.00	ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಪಂಪ್ ಮತ್ತು ಮೆಷಿನರಿಗಳಿಗೆ ಟೆಂಡರ್ ಕರೆಯಲಾಗಿದೆ. ಆರ್.ಸಿ.ಸಿ. ಪ್ರಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
2.	ಬೆಕ್ಕಳಲೆ	21.00	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಆರ್.ಸಿ.ಸಿ. ಪ್ರಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
3.	ಕಿರಂಗೂರು	26.50	ಭೂಸ್ವಾಧೀನ ಅಡಚಣೆಯಿಂದ ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ವಿಳಂಭವಾಗಿರುತ್ತದೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಆರ್.ಸಿ.ಸಿ. ಪ್ರಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
4.	ಹಾಲೇಹಳ್ಳಿ	17.00	ಪಂಪ್‌ಹೌಸ್ ಮತ್ತು ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಆರ್.ಸಿ.ಸಿ. ಪ್ರಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
5.	ಮಂಡ್ಯ	19.00	ಪಂಪ್‌ಹೌಸ್, ವಾಲ್ವ್ ಛೇಂಬರ್, ವಿತರಣಾ ತೊಟ್ಟಿ ಪೂರ್ಣಗೊಂಡಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ.

1	2	3	4
6.	ಬೂದಗುಪ್ಪೆ	19.00	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಆರ್.ಸಿ.ಸಿ. ಪ್ರೆಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
7.	ಕೆ. ಕೋಡಿಹಳ್ಳಿ	25.00	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಆರ್.ಸಿ.ಸಿ. ಪ್ರೆಷರ್ ಪೈಪ್ ಒದಗಿಸಲು ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.
8.	ಹೆಮ್ಮನಹಳ್ಳಿ	30.00	ಕಾಮಗಾರಿಗಳನ್ನು ಟರ್ನ್-ಕೀ ಆಧಾರದ ಮೇಲೆ ತೆಗೆದುಕೊಳ್ಳಲು ಟೆಂಡರ್ ಕರೆಯಲಾಗಿದೆ
9.	ಚಿಕ್ಕರಸಿನಕೆರೆ	75.00	ಪಂಪ್‌ಹೌಸ್ ಮತ್ತು ರೈಸಿಂಗ್ ಮೇನ್ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ. ಪೈಪುಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿದೆ.
10.	ಕನ್ನಲಿ	24.20	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ.
11.	ಹುಚ್ಚಲಗೆರೆ	27.50	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ.
12.	ಕೋಣನಹಳ್ಳಿ	25.00	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳು ಸರಬರಾಜಾಗಿವೆ.

1	2	3	4
13.	ಯತ್ತಗದಹಳ್ಳಿ	21.00	ಕಾಮಗಾರಿಯು ಭೂಸ್ವಾಧೀನ ಅಡಚಣೆಯಿಂದ ವಿಳಂಭವಾಗಲು ಕಂದಾಯ ಇಲಾಖೆಯೊಡನೆ ವ್ಯವಹರಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
14.	ಮರಿಲಿಂಗನದೊಡ್ಡಿ	19.25	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಗಿದಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ.
15.	ಕೀಲಾರ	16.00	ರೈಸಿಂಗ್ ಮೇನ್ ಕಾಮಗಾರಿಯನ್ನು ಹೊರತುಪಡಿಸಿ ಉಳಿದ ಸಿವಿಲ್ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಪಂಪ್ ಮತ್ತು ಮೆಷಿನರಿಗಳನ್ನು ಒದಗಿಸಿ ಸ್ಥಾಪಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ.
16.	ಕಾಗೇಹಳ್ಳದದೊಡ್ಡಿ	27.50	ಭೂಸ್ವಾಧೀನ ಅಡಚಣೆಯಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
17.	ತಗ್ಗಹಳ್ಳಿ	28.00	ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿವೆ. ರೈಸಿಂಗ್ ಮೇನ್‌ಗಾಗಿ ಆರ್.ಸಿ.ಸಿ. ಪ್ರೆಷರ್ ಪೈಪ್‌ಗಳನ್ನು ಒದಗಿಸಲು ಆದೇಶ ನೀಡಲಾಗಿದೆ.